ಮೈಸೂರ ಗೆಜೆಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 6, ಸ್ಯ 1887.

ಗಮನ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗಿರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿರ್ಯಾಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇನ್ಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇನ್ಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಫಾರೆಸ್ಟ್ಸ್ ಇಲಾಖಾ.

ತಾರೀಖು 23ನೇ ಜೂನ್ 1887.

ಹಾಸನದ ಡಿಸ್ಟ್ರಿಕ್ಟ್ಸ್ ಮುಂಜರಾಬಾದ್ ತಾಲ್ಲೂಕಿನಲ್ಲಿ ಇರತಕ್ಕ ಇದರಡೀ ಕಂಡ ಫೋಟೋ ಫಾರೆಸ್ಟ್ಸುಗಳು ಮತ್ತು ವ್ಹಾಟೇರ್ಷೆಡ್‌ಗಳಲ್ಲಿ ಉತ್ಪತ್ತಿಯಾಗುವ ಇಲಾಖಿ ಮತ್ತು ಮೇಣಸನ್ನು ಗೇಣೀಮೂಲಕ ಹತ್ತು ವರುಷಗಳ ಕಾಲಕ್ಕೆ ಅಂದರೆ 1887—88ನೇ ಸರ್ಕಾರ್ ಸಾಲ್ ಲಾಗಾಯತು 1896—97ನೇ ಸರ್ಕಾರ್ ಸಾಲಿನವರಿಗೆ ಜವಾಯಿಸುವ ಹಕ್ಕುದಾರೀ ಬಗ್ಯೆ ದರಖಾಸ್ತುಗಳು ಯಿದರ ದೆಸೆಯಿಂದ ಅಪೇಕ್ಷಿಸಲ್ಪಡುತವೆ.

1. ಬಿದುರದ ಉಡವೇದೇಖೀಲ್ ಬಿಸಲೇಫೋಟೆ ಫಾರೆಸ್ಟ್ಸ್.

2. ಕಾಗನೀರೆಘಾಟಿ ಫಾರೆಸ್ಟ್ಟು.
3. ಕೆಂಪಹೊಳೆ ಮತ್ತು ಕೆಂಚನ ಕುಮರಿ ಫಾರೆಸ್ಟ್ಟುಗಳು.
4. ಕಬ್ಬಿನಾಲೆ ಮತ್ತು ಮೇಲಗದ್ದೆ ಫಾರೆಸ್ಟ್ಟುಗಳು.
5. ನಡತೊಪ್ಪಲು ಪ್ಲಾಂಟೇರ್ಷ್.

2. ದರಖಾಸ್ತುಗಳು, "ಫಾಟ್ ಫಾರೆಸ್ಟ್ಟುಗಳು ವ ಪ್ಲಾಂಟೇರ್ಷ್‌ಗಳ ಇಲಾಜಿ ಮತ್ತು ಮೆಣಸಿನಗೇಣಿಗೋಸ್ಕರ ದರಖಾಸ್ತುಗಳು" ಯೆಂಬದಾಗಿ ಮೇಲ್‌ವಿಳಾಸ ಬರೆಯಲ್ಪಟ್ಟು ಹಾಸನದ ಮೊಕ್ತಾಂ ಹಾಸನದ ಡಿಸ್ಟ್ರಿಕ್ಟ್ ಜೆಪ್ಯೂಟಿ ಕಮ್ಮಿಷನರವರಿಗೆ 1887ನೇ ಇಸವಿ ಆಗಸ್ಟ್ 10ನೇ ಮಾರ್ಚಿಂ ಯಾ ಅದಕ್ಕೆ ಮುಂಚಿತವಾಗಿ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ದರಖಾಸ್ತುಗಳು 1887ನೇ ಇಸವಿ ಆಗಸ್ಟ್ 10ನೇ ಮಾರ್ಚಿಗಿನಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ ಸದರೀ ಯವರಿಂದಲಾಗಲೀ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದಲಾಗಲೀ ಆಫೀಸ್ ಹೊತ್ತಿನಲ್ಲಿ ಖುಲ್ಲಾ ಮಾಡಲ್ಪಡುವದು. ದರಖಾಸ್ತುಗಳ ಆಖೈರ್ ವಿಲೇವಾರಿಯು ಮೈಸೂರು ದೇಶದ ಫಾರೆಸ್ಟ್ ವ ಪ್ಲಾಂಟೇರ್ಷ್‌ಗಳ ಇನ್‌ಸ್ಪೆಕ್ಟರ್‌ಜನರಲ್‌ಯವರಿಗೆ ಕೇರಿಯಿರುತ್ತೆ; ಸದರೀ ಯಾವ ದರಖಾಸ್ತನ್ನಾಗಲಿ ಯಾ ತಮಾಂ ದರಖಾಸ್ತುಗಳನ್ನಾಗಲೀ ಯಾವ ಸಬಬೂ ತಿಳಿಸದೆಯೇ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

3. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಕರ್ಟಿಸೀನೋಟಿನ ಮೂಲಕವಾಗಿಯಾಗಲೀ ವಂದು ನೂರು ರೂಪಾಯಿಗಳ ಠೇವಣಿಯನ್ನು ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾರಾಜಾರ್ಮಾಡಲ್ಪಟ್ಟ ಠೇವಣಿಗಳು, ಆಯಾ ಜನಗಳಿಗೆ ಕ್ರಮವಾಗಿ ವಾಪಸ್ ಮಾಡಲ್ಪಡುವವು.

4. ಯಾವ ದರಖಾಸ್ತು ಫಾರೆಸ್ಟ್ ವ ಪ್ಲಾಂಟೇರ್ಷ್‌ಗಳ ಇನ್‌ಸ್ಪೆಕ್ಟರ್ ಜನರಲ್‌ಯವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತದೆಯೋ ಅಂಥಾ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ 15 ದಿವಸಗಳವಳಗಾಗಿ ನಗದಾಗಿಯಾದರೂ ಅಥವಾ ಕರ್ಟಿಸೀನೋಟುಗಳ ಮೂಲಕವಾಗಿಯಾದರೂ, ತಾನು ಮೊದಲೆ ಹಾಜರ್ಮಾಡಿರುವ ಡಿಪಾಜಿಟ್ ಮೊಬಲಗು ಠೇವಣಿ ಮೊಬಲಗಿನ ಹತ್ತರಲ್ಲಿ ವಂದು ಭಾಗಕ್ಕೆ ಸಮನಾಗುವಂತೆ ಠೇವಣಿ ಮೊಬಲಗನ್ನು ಡೆಪ್ಯೂಟಿ ಕಮ್ಮಿಷನರಲ್ಲಿ ಹಾಜರ್ಮಾಡಿ, ತಕ್ಕ ಛಾಪಾ ಕಾಗದ್ದಲ್ಲಿ ಮುಂದೆ ವುದಹರಿಸಲ್ಪಟ್ಟ ಷರತ್ತುಗಳಿಗೆ ಬಳಪಟ್ಟು ಬದ್ಧನಾಗಿ ಕರಾರು ಬರೆದು ಕೊಡತಕ್ಕದ್ದು; ಮತ್ತು ಆತನು ಸದರೀ ಕರಾರಿಗೆ ರುಜು ಮಾಡುವದಕ್ಕೆ ತಪ್ಪಿದರೆ ಯಾ ತಿರಸ್ಕರಿಸಿದರೆ ಅಥವಾ ಅವಶ್ಯಕವಾದ ಠೇವಣಿಯನ್ನು ಹಾಜರ್ಮಾಡದಿದ್ದರೆ, ಮೊದಲೇ ಯಿಜೋಣಾದ ಡಿಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಗೇಣಿಯು ಅನ್ಯಥಾ ವಿಲಾವಾಡಲ್ಪಡುವದು.

5. ಹಾಲೀ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುವ ಗೇಣಿಯು, ಇದರಡೀ ಕಂಡ ಷರತ್ತುಗಳಿಗೆ ವಳಪಟ್ಟಿರತಕ್ಕದ್ದು:—

I. ಗೇಣಿ ಮೊಬಲಗು ಹತ್ತು ಸಮನಾದ ಸಾಲಿಯಾನಾ ಖಿಸ್ತುಗಳಾಗಿ ಪ್ರತಿ ಆಗಸ್ಟು ತಿಂಗಳಲ್ಲಿ ಅಂದರೆ ಆಯಾ ಕಾಲದ ಫಸಲನ್ನು ಜಮಾಯಿಸುವದಕ್ಕೆ ಮುಂಚಿತವಾಗಿ ಸರಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಗೇಣೀದಾರನು ಇದಕ್ಕೆ ತಪ್ಪಿದರೆ ಗೇಣಿಯು ರದ್ದು ಮಾಡಲ್ಪಟ್ಟು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟ್ಟು ಯಾ ಪ್ಲಾಂಟೇರ್ಷ್ ಸರ್ಕಾರ್ ಸ್ವಾಧೀನತೆಗೆ ತೆಗದುಕೊಳ್ಳಲ್ಪಡುವದು. ಗೇಣೀದಾರನಿಂದ ಇಡಲ್ಪಟ್ಟ ಠೇವಣಿಯು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

II. ಗೇಣೀ ವಾಯಿದೆಯು ಮುಗಿದ ತರುವಾಯ, ಗೇಣಿಯನ್ನು ರೆನ್ಯೂ ಯಾನೆ ಪುನಹಾ ಪಡೆಯುವ ಬಗ್ಯೆ ಸರ್ಕಾರದವರಿಗೆ ಯುಕ್ತವಾಗಿ ತೋರಿಬರುವ ಷರತ್ತುಗಳ ಮೇಲೆ ಮತ್ತು ಹಾಂಗೆ ಗೊತ್ತುಮಾಡಲ್ಪಡಬಹುದಾದ ಕಾಲಕ್ಕೆ ಗೇಣೀದಾರನಿಗೆ ಅವಕಾಶ ಕೊಡಲ್ಪಡುವದು.

III. ಗೇಣಿಯು, ಯಿಲಾಜಿ ಮತ್ತು ಮೆಣಸನ್ನು ಜಮಾಯಿಸುವದಕ್ಕೂ ಮತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾತ್ರವೇ ಆಗಿರುವದರಿಂದ, ಇನ್ಯಾವ ತರಹೆಯ ಇತರ ಫಸಲಾಗಲೀ ಗೇಣಿಗೆ ಪಡೆದಿರುವ ಫಾರೆಸ್ಟ್ಟಿನಲ್ಲಿ ಸಾಗುವಳಿ ಮಾಡಲ್ಪಡಕೂಡದು, ಪರಂತು ಯಿಲಾಜಿ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬಾಳಿ ಹರಳು ಯಾ ಇತರ ಮರಗಳು ಬೆಳಿಸಕೂಡದೆಂದು ಅರ್ಥವಾಗಿಡತಕ್ಕದ್ದಲ್ಲಾ.

IV. ಫಾರೆಸ್ಟ್ಟು ಆಫೀಸರರ ಬರಹಮೂಲಕವಾದ ಅಪ್ಪಣೆ ವಿನಾ ಯಾವವಿಧವಾದ ಮರವೇಆಗಲೀ ಕಡಿಯಲ್ಪಡಕೂಡದು; ಮತ್ತು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟ್ಟುಗಳಿಂದ ಯಾವ ಇಲಾಜೀಗಿಡಗಳಾಗಲಿ ಮೆಣಸಿನಬಳ್ಳಿಯಾಗಲಿ ಯಾವ ಸಂದರ್ಭಗಳಲ್ಲೂ ಆಗೆದು ಆಚಿಗೆ ಸಾಗಿಸಲ್ಪಡಕೂಡದು. ಯಿಲಾಜೀ ಗಿಡಗಳ ಮತ್ತು ಮೆಣಸಿನಬಳ್ಳಿಗಳ ಬೆಳವಣಿಗೆ ಯಾ ಅಭಿವೃದ್ಧಿಗೋಸ್ಕರವೇ ಜಮೀನನ್ನು ಬೈಲ್ ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾಗ ಗೇಣೀದಾರನು ಫಾರೆಸ್ಟ್ಟು ಆಫೀಸರರಿಗೆ ಬರೆದು ಕೊಳ್ಳತಕ್ಕದ್ದು, ಅವರು ಕತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತು ಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಫಾರೆಸ್ಟ್ಟು ಇಲಾಖೆಯವರಿಂದ ಸ್ವಾಧೀನ

ಕ್ಕೆ ತೆಗೆದುಕೊಳ್ಳಲ್ಪಡತಕ್ಕದ್ದು. ಗೇಣೀದಾರನು ಸದರೀ ಮರಗಳ ಪೈಕಿ ಯಾವದನ್ನಾದರೂ ಅಪೇಕ್ಷಿಸಿದರೆ, ಇದರಡೀ ಕಂಡ ಗೊತ್ತಾದ ಸೀನಿಯ ರೇಜ್ ಯಾನೆ ತೀರ್ವೇ ದರಗಳು ಯಾ ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ಯಿನ್ನೂ ಕಮ್ಮಿಯಾದ ದರಗಳು ಪಾವತೀ ಮಾಡಲ್ಪಟ್ಟ ತರುವಾಯ ಕೊಡಲ್ಪಡತಕ್ಕದ್ದು:—

		ರೂ.
ಪ್ಯೂ	ದರಮರ ವಂದಕ್ಕೆ	15
ಹೆಸವಾ	ಡಿಟೋ	10
ಕರೀಮರ	ಡಿಟೋ	8
ನಂದಿ	ಡಿಟೋ	8
ಹೆಜನಿ	ಡಿಟೋ	6
ಯಬನಿ	ಡಿಟೋ	10
ಇತರ ತಮಾಂ ತರಹೆಯ ಮರಗಳೂ	ಡಿಟೋ	$3\frac{1}{2}$
ಬೊಂಬುಗಳು	ದರ 100ಕ್ಕೆ	10

V. ಗೇಣೀದಾರನು, ಇಲಾಚಿ ಮತ್ತು ಮೆಣಸು ವಿನಾ ಇತರ ಯಾವ ಫಾರೆಸ್ಟು ಹುಟ್ಟುವಳಿಗಾಗಲೀ ಹಕ್ಕುದಾರನಾಗಿರುವದಿಲ್ಲಾ, ಮತ್ತು ಫಾರೆಸ್ಟುಗಳು ವ ಪ್ಲಾಂಟೇಷ್ಣಗಳಲ್ಲಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ, ನಿರೋಧಪಡಿಸುವದಕ್ಕಾಗಲಿ ಯಾ ಮತ್ಯಾವ ವಿಧವಾಗಿಯಾದರೂ ಆಟಂಕಪಡಿಸುವದಕ್ಕಾಗಲೀ ಗೇಣೀದಾರಗೆ ಸ್ವತಂತ್ರ ವಿರುವದಿಲ್ಲಾ; ಮತ್ತು ಗವರ್ಮೆಂಟಿನವರು ಅಂಥಾ ತಮಾಂ ಫಾರೆಸ್ಟು ವ ಪ್ಲಾಂಟೇಷ್ಣಗಳಲ್ಲಿಯ ಯಲ್ಲ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನೂ ತಾವೇ ಉಳಸಿಕೊಂಡಿರುತ್ತಾರೆ.

VI. ಈ ರೂಲ್ಸ್ ಅನುಸರಿಸಿ ಪಡೆದ ಇಲಾಚಿ ವ ಮೆಣಸಿನ ಗೇಣಿಯು ಗೇಣೀದಾರನ ಯಿಷ್ಟಾನುಸಾರ ವಿಕ್ರಯಿಸಲ್ಪಡಬಹುದು ಯಾ ಅನ್ಯಥಾ ಪರಭಾರೇ ಮಾಡಲ್ಪಡಬಹುದು, ಪರಂತು ಅಂಥಾ ಪರಭಾರೆಯ ವರ್ತಮಾನವು ಡೆಪ್ಯುಟಿ ಕಮ್ಮಿಷನರವರಿಗೆ ಅವರ ಆಫೀಸಿನಲ್ಲಿ ದಾಖಲೆ ಬಗ್ಗಾಗಿ ಕೊಡಲ್ಪಡತಕ್ಕದ್ದು, ಮತ್ತು ಗೇಣಿಯ ಪರಭಾರೆಯು ರೆಜಿಸ್ಟ್ರೇಷ್ಣ ಆಕ್ಟಿನ ನಿಯಮಗಳನ್ನನುಸರಿಸಿ ಕ್ರಮವಾಗಿ ರಿಜಿಸ್ಟ್ರು ಮಾಡಲ್ಪಡತಕ್ಕದ್ದು.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಅಂಚೇ ಇಲಾಖಾ.

ನಂಬರ್ 167—92. ತಾರೀಖು 28ನೇ ಜುಲೈ 1887.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮನ್ ಮಹಾರಾಜ ರಾಜಾನಾಹೇಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೇ ಆಫೀಸ್‌ಗಳು ಸ್ಥಾಪಿಸಲ್ಪಟ್ಟು ಯಿರುತ್ತೆ:—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು.
ನೆಲಮಂಗಲ ..	ಯಲೆಕ್ಯಾತನಹಳ್ಳಿ
ಮಾಗಡಿ ..	ತಿಪ್ಪಸಂದ್ರ

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು.
ಮದ್ದಗಿರಿ ...	ಹೊಳವನಹಳ್ಳಿ
ಮಂಜರಾಬಾದ್ ..	ವುದೇವಾರ
ಡಿಟೋ ..	ಮೂರ್ನಹಳ್ಳಿ
ತುಮಕೂರು ...	ಜೆಳಧರ

ಬಿ. ಮರಿದೇವಯ್ಯ,
ಅಂಚೇ ಬಕ್ಷಿ.